ಮುಂದಿಟ್ಟಾಗ ಅಮ್ಮ ಪಿರಿಪಿರಿ ಶುರುಮಾಡಿದರು. ಅವರನ್ನುವುದನ್ನು ಕೇಳುವುದಕ್ಕೆ ಅವಳೆಲ್ಲಿದ್ದಾಳೆ. ಸದ್ಯ, ಖುಷಿಗೆ ಅಮ್ಮನೇ ಬೇಕೂಂತೇನಿಲ್ಲ– ಅಜ್ಜಿ ಇದ್ದರೆ ಸಾಕಾಗಿತ್ತು.

ಅಂದಿನ ಆ ಧಾರಾಕಾರ ಮಳೆ ನಿಂತಿದ್ದು ಮಾತ್ರ ಮಧ್ಯರಾತ್ರಿಯ ನಂತರವೇ. ಮಳೆ ನಿಂತಿದ್ದೇ ನನಗೆ ಗಾಢವಾದ ನಿದ್ರೆ ಆವರಿಸಿತ್ತು. ಮೈ ತುಂಬಾ ಹೊದ್ದುಕೊಂಡು ಮಲಗಿದ್ದೆ. ಬೆಳಗ್ಗೆ ಸುಮಾರು ಐದು ಗಂಟೆ ದಾಟಿರಬಹುದಾದ ಹೊತ್ತಿಗೆ ಹೊರಗಡೆ ಚಿಟ್ಟನೆ ಮಿಂಚಿದ ಮಿಂಚಿಗೆ, ಮನೆಯೊಳಗಡೆ ಎಲ್ಲೋ ಚಟ್ಟೆಂದು ಬಲ್ಬೊಂದು ಸಿಡಿದ ಸದ್ದು. ಹಿಂದೆಯೇ ಆಕಾಶದಲ್ಲೆಲ್ಲೋ ರಾಕ್ಷಸಗಾತ್ರದ ಬಂಡೆಯೊಂದು ಉರುಳಿಬಿದ್ದಿತೇನೋ ಅನ್ನುವಂತೆ ಭೂಮಿಯನ್ನೇ ನಡುಗಿಸುವಂತಹ ಸಿಡಿಲಿನ ಆರ್ಭಟಕ್ಕೆ ರಪಕ್ಕನೆ ಎಚ್ಚರವಾಗಿ ಎದ್ದು ಕುಳಿತಿದ್ದೆ. ಕೋಣೆಯ ಹೊರಗಡೆ ಅಮ್ಮ ಚೀರಿದ ಸದ್ದು ಕೇಳಿಸಿತು. ಏನಾಯಿತೋ ಏನೋ ಅಂತಂದುಕೊಂಡು ಥಟ್ಟನೆ ಮಂಚದಿಂದಿಳಿದು, ಬಾಗಿಲು ಸರಿಸಿ ಹೊರಧಾವಿಸಿದೆ. ಅಮ್ಮ ದೇವರ ಕೋಣೆಯ ಮುಂದೆ ಕಿವಿಗೆ ಕೈಯೊತ್ತಿ ನಿಂತು ನಡುಗುತ್ತಿದ್ದಳು. ಅಷ್ಟರಲ್ಲಿ ಅಮ್ಮನ ಕೋಣೆಯಲ್ಲಿಯೇ ಮಲಗಿದ್ದ ಖುಷಿ ಅಳುವ ಸದ್ದೂ ಕೂಡಾ ಕೇಳಿಸಿತು.

'ಏನಾಯಿತಮ್ಮ?' ಅನ್ನುತ್ತಾ ಹೋಗಿ ಅಮ್ಮನನ್ನು ಬಳಸಿ ಹಿಡಿದೆ.

'ದೇವರ ಕೋಣೆಯಲ್ಲಿದ್ದ ಬಲ್ಬು ಹೇಗೆ ಒಡೆದು ಹೋಯ್ತು ನೋಡು... ಅಪಶಕುನ... ಅಪಶಕುನ...' ಎಂದವರು ಸುಧಾರಿಸಿಕೊಳ್ಳುತ್ತಾ, ತಕ್ಷಣ ಎಚ್ಚೆತ್ತವರಂತೆ,

'ಅಯ್ಯೋ ಏನು ಸಿಡಿಲಪ್ಪ. ನಿದ್ದೆಯಲ್ಲಿದ್ದ ಮಗು ಎಚ್ಚರವಾಗಿ ಹೆದರಿಕೊಂಡು ಅಳ್ತಾಯಿದೆ' ಎಂದು ಅತ್ತ ಧಾವಿಸಿದರು. ನಾನು, 'ಮಿಂಚು, ಸಿಡಿಲಿನ ಆರ್ಭಟಕ್ಕೆ ಎಲ್ಲೋ ಇಲೆಕ್ಟ್ರಿಕ್ ಪ್ರಾಬ್ಲಂ ಆಗಿ ಬಲ್ಬು ಒಡೆದಿರಬೇಕು. ಅಷ್ಟಕ್ಕೆ ಈ ಅಮ್ಮ ಅಪಶಕುನ ಅಂತೆಲ್ಲಾ ಕಲ್ಪಿಸಿಕೊಳ್ತಿದ್ದಾಳೆ' ಅಂದುಕೊಂಡು ನಸುನಗುತ್ತಾ ಬೆಳಗಿನ ನಿತ್ಯಕರ್ಮಗಳಲ್ಲಿ ತೊಡಗಿದೆ.

ಸ್ನಾನ ಮುಗಿಸಿ ಬಚ್ಚಲು ಮನೆಯಿಂದ ಹೊರಬರುವಾಗ ಮೊಬೈಲ್ ರಿಂಗಣಿಸುತ್ತಿತ್ತು. ಕೈಗೆತ್ತಿಕೊಂಡು ನೋಡಿದ್ರೆ, ಯಾವುದೋ ಅನ್‌ನೋನ್ ನಂಬರ್. ರಿಸೀವ್ ಮಾಡಿ ಕಿವಿಗಾನಿಸಿಕೊಂಡು, 'ಹಲೋ' ಅಂದೆ. ಅತ್ತಲಿಂದ,

'ಕಾರ್ಕಳ ಪೊಲೀಸ್ ಸ್ಟೇಷನ್‌ನಿಂದ' ಅಂದಾಗ ಗಾಬರಿಯಾದೆ.

'ಹೇಳಿ ಸರ್?' ಎಂದ ನನ್ನ ಧ್ವನಿಯಲ್ಲಿ ಸಣ್ಣ ನಡುಕ.

'ಸುಲೋಚನಾ ನಿಮ್ಮ ಪತ್ನಿಯಲ್ವಾ?' ಅತ್ತಲಿಂದ ಕೇಳಿದಾಗ

'ಹೌದು. ಏನು ವಿಷಯ ಸರ್?' ಕೇಳಿದೆ ಗಾಬರಿಯಿಂದ.

'ಇಲ್ಲೇ ಸಾಣೂರಿನ ಬಾಡಿಗೆ ಮನೆಯೊಂದರಲ್ಲಿ ಅವರು ಮತ್ತು ಶೇಷಾದ್ರಿ ಅನ್ನುವವರು ಜೊತೆಗೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನೀವು ಆದಷ್ಟು ಬೇಗ ಬನ್ನಿ' ಎಂದಾಗ ನನ್ನ ತಲೆಗೆ ಸಿಡಿಲೊಂದು ಬಂದು ಅಪ್ಪಳಿದಷ್ಟು ದೊಡ್ಡ ಆಘಾತವಾಗಿ ನಾನಲ್ಲೇ ಕುಸಿದುಬಿದ್ದು 'ಅಮ್ಮಾ...' ಎಂದು ಚೀರಿದ್ದೆ. ಅಮ್ಮ ಧಾವಿಸಿ ಬಂದಿದ್ದರು.

ಮುಂದೆ ಯಥಾವತ್ತಾಗಿ ಪೊಲೀಸ್ ಕೇಸ್, ಮರಣೋತ್ತರ ಪರೀಕ್ಷೆ, ಅದೂ ಇದೂ ಎಂದು ಎಲ್ಲಾ ಪ್ರೊಸೀಜರ್‌ಗಳು ನಡೆಯಿತು.

'ನಾವಿಬ್ಬರು ಜೀವನದಲ್ಲಿ ನೊಂದು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದೇವೆ. ನಮ್ಮ ಸಾವಿಗೆ ಯಾರೂ ಕಾರಣರಲ್ಲ' ಎಂದು ಅವರಿಬ್ಬರೂ ಚೀಟಿ ಬರೆದಿಟ್ಟದ್ದರಿಂದ ಎಲ್ಲವೂ ಅಲ್ಲಲ್ಲಿಗೆ ಮುಚ್ಚಿಹೋಯಿತು. ಅಮ್ಮನಂತು, 'ಅವಳಿಗೆ ಮೊದಲಿನಿಂದಲೂ ಆ ಮಿಂಡನ ಜೊತೆ ಸಂಬಂಧ ಇತ್ತು. ಅವಳ ಮನೆಯವರು ಆಕೆಯನ್ನು ನನ್ನ ಮಗನ ಕೊರಳಿಗೆ ಕಟ್ಟಿ, ನನ್ನ ಮಗನ ಬದುಕನ್ನು ಸರ್ವನಾಶ ಮಾಡಿದ್ರು' ಎಂದು ಊರೆಲ್ಲಾ ಡಂಗುರ ಸಾರಿದಳು. ಸುಲೋಚನಾ ಮನೆಯವರೂ ಕೂಡಾ,

'ಹುಟ್ಟುವಾಗ್ಲೇ ಈ ಮುಂಡೆ ಸತ್ತೋಗಿದ್ದಿದ್ರೆ ಎಷ್ಟೋ ಚೆನ್ನಾಗಿತ್ತು. ಗಂಡ, ಮಗುವನ್ನು ಬಿಟ್ಟು ಇನ್ಯಾವನನ್ನೋ ಕಟ್ಕೊಂಡು, ಅವನ ಜೊತೆಗೆ ನೇಣಾಕಿಕೊಂಡು ಸತ್ತು, ನಮ್ಮ ಮರಿಯಾದೆ ಕಳೆದ್ಳು' ಎಂದು ಅಲವತ್ತುಕೊಂಡರು.

ಇನ್ನು ಶೇಷಾದ್ರಿಯ ಗೆಳೆಯರ ಕಡೆಯಿಂದ, 'ಶೇಷಾದ್ರಿ ಮನೆಯಲ್ಲಿ ಈ ಮದುವೆಗೆ ಒಪ್ಪಿಗೆ ಇಲ್ಲದುದಕ್ಕೆ ಅವರಿಬ್ರು ಆತ್ಮಹತ್ಯೆ ಮಾಡಿಕೊಂಡಿದ್ದಂತೆ'